ಎಂದು ಜ್ಞಾಪಿಸಿಕೊಳ್ಳುತ್ತಾರೆ.

ಡಾ. ಸಂಜೀವಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವೈದ್ಯಕೀಯ ನಿಯತಕಾಲಿಕೆಗಳಲ್ಲಿ ಸುಮಾರು ೧೬೦ ಅತ್ಯುತ್ತಮ ಲೇಖನಗಳನ್ನು ಪ್ರಕಟಿಸಿದ್ದಾರೆ. ಡಾ. ಬಿ.ಸಿ. ರಾಯ್ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿಗಳನ್ನು ಪಡೆದಿದ್ದರು. ಅವರು ಮೃದು ಮಾತಿನ ಮಿತಭಾಷಿಯಾಗಿದ್ದರು. ಅವರ ಅಸಾಧಾರಣ ಸಾಧನೆ ಗೊತ್ತಿದ್ದವರಿಗೆ ಮಾತ್ರ ಅವರ ವ್ಯಕ್ತಿತ್ವದ ಹಿರಿಮೆ ಗೊತ್ತಾಗುತ್ತಿತ್ತೇ ಹೊರತು ಸಾಮಾನ್ಯರಿಗಲ್ಲ. ಅವರ ಕೆಲಸಗಳು ಅವರ ವ್ಯಕ್ತಿತ್ವವನ್ನು ಪರಿಚಯಿಸುತ್ತಿದ್ದವೇ ಹೊರತು ಅವರಾಗಿ ಅವುಗಳ ಬಗ್ಗೆ ಎಂದೂ ಮಾತನಾಡುತ್ತಿರಲಿಲ್ಲ.

ಡಾ. ಸಂಜೀವಿಯವರ ಬದುಕಿನಿಂದ ಪ್ರೇರಣೆಗೊಂಡು ವೈದ್ಯವೃತ್ತಿಯಲ್ಲಿರುವವರು ಅವರಿಂದ ಸ್ಫೂರ್ತಿಪಡೆಯಬೇಕಾದ ಅಗತ್ಯವಿದೆ. ಈ ಸಂಬಂಧವಾಗಿ ಎರಡು ವಿಷಯಗಳ ಕಡೆ ನಮ್ಮ ಯುವ ವೈದ್ಯರು ಗಮನ ಕೊಡುವುದು ಆವಶ್ಯಕ. ಅದೇ ಅವರಿಗೆ ನಿಜವಾಗಿ ಸಲ್ಲಿಸುವ ಗೌರವ.

ಮೊದಲನೆಯದಾಗಿ ಡಾ.ಸಂಜೀವಿಯವರ ಚಿಕಿತ್ಸಾ ಶಕ್ತಿ. ಇವರ ಹಸ್ತಗುಣ ಎಂದರೆ ಚೆನ್ನೈಯಲ್ಲಿ ರಾಮಾಯಣದ ಹನುಮಂತ ತಂದ ಸಂಜೀವಿನಿಯಷ್ಟೇ ಪ್ರಸಿದ್ಧವಾಗಿತ್ತು. ಇದಕ್ಕೆ ಕಾರಣ ಅವರು ರೋಗಿಗಳನ್ನು ಪರೀಕ್ಷಿಸುವಾಗ, ತಾಳ್ಮೆಯಿಂದ ಪಡೆಯುತ್ತಿದ್ದ ಅಪಾರ ಮಾಹಿತಿ ಮತ್ತು ವ್ಯಕ್ತಿಗತ ರೋಗ ವಿಶ್ಲೇಷಣಾ ಕಲೆ(Art of Personal Diagnosis). ರೋಗಿಗಳನ್ನು ಅನೇಕ ಸಾರಿ ಅನಗತ್ಯ ಮತ್ತು ದುಬಾರಿ ಟೆಸ್ಟ್‌ಗಳಿಗೆ ಒಳಪಡಿಸದೆ (ತೀರ ಅನಿವಾರ್ಯವಾದಾಗ ಹೊರತು) ರೋಗಿಗಳು ಕೊಡುವ ಮಾಹಿತಿಯಿಂದಲೇ ರೋಗ ವಾಸಿಮಾಡುವ ಕ್ರಮವನ್ನು ಅನುಸರಿಸುವುದು ಉತ್ತಮ.

ಎರಡನೆಯದಾಗಿ ವೈದ್ಯಕೀಯ ವೃತ್ತಿಯನ್ನು ಕೈಗಾರಿಕೆಯಂತೆ (industry) ಪರಿಗಣಿಸಿ, ಯಂತ್ರಗಳ ಮೂಲಕ ರೋಗ ಪರೀಕ್ಷೆ ಮಾಡುವುದನ್ನು ಕಡಿಮೆ ಮಾಡಿ ಶ್ರೀಮಂತ, ಶ್ರೀಸಾಮಾನ್ಯ ಇಬ್ಬರಿಗೂ ಸಮಾನ ರೀತಿಯ ಚಿಕಿತ್ಸೆ ನೀಡುವ ಮೂಲಕ 'ವೈದ್ಯಕೀಯ ವೃತ್ತಿ ಒಂದು ಸೇವೆ (Service)' ಎಂಬ ನಮ್ಮ ಪೂರ್ವಜರ ಆದರ್ಶವನ್ನು ಪುನಃ ಎತ್ತಿ ಹಿಡಿಯುವುದು.

ಕೇಳಿ ತಿಳಿಯಿರಿ

(ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಗಳನ್ನು ಪೂಜ್ಯ ಸ್ವಾಮಿ ಪ್ರೇಮೇಶಾನಂದರ (೧೮೮೪-೧೯೬೧) ಆಂಗ್ಲ ಭಾಷೆಯಲ್ಲಿ ಪ್ರಕಟವಾಗಿರುವ *GO FORWARD* ಗ್ರಂಥವನ್ನು ಆಧರಿಸಿ ಕನ್ನಡದ ರೂಪಾಂತರವನ್ನು ನಮ್ಮ ಓದುಗರಿಗೆ ನೀಡುತ್ತಿದ್ದೇವೆ.)

❖ ನನ್ನ ಜೀವನದಲ್ಲಿ ಓರಣವಿಲ್ಲ. ಎಲ್ಲವೂ ಗೊಂದಲಮಯವಾಗಿ ಕಾಣುತ್ತಿದೆ. ಇದಕ್ಕೆ ಪರಿಹಾರವೇನು?

ಅನೇಕರು ಗೊಂದಲದ ಮಧ್ಯೆ ಹುಟ್ಟಿ, ಗೊಂದಲದೊಂದಿಗೇ ಜೀವಿಸಿ, ಇಡೀ ಜೀವನವನ್ನೇ ಅಸ್ತವ್ಯಸ್ತವಾಗಿಸಿಕೊಳ್ಳುತ್ತಾರೆ. ಇದಕ್ಕೆ ಮೂಲಕಾರಣ ನಮ್ಮ ಜೀವನ, ಕೆಲಸ ಹಾಗೂ ಮನಸ್ಸುಗಳ ನಡುವೆ ಹೊಂದಾಣಿಕೆ ಇಲ್ಲದಿರುವುದು. ಇದರಿಂದಾಗಿ ಎಷ್ಟೊಂದು ಶಕ್ತಿ, ಸಮಯ ಪೋಲಾಗಿ ನಾವು ಏನನ್ನೂ ಸಾಧಿಸುವುದೇ ಇಲ್ಲ. ನಾನು ಏತಕ್ಕಾಗಿ ಈ ಕೆಲಸ ಮಾಡುತ್ತಿದ್ದೇನೆ? ನನ್ನ ಜೀವನದಲ್ಲಿ ನಾನು ಏನನ್ನು ಸಾಧಿಸಲು ಬಯಸುತ್ತೇನೆ?—ಇಂತಹ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳುವುದೇ ಇಲ್ಲ. ನಮ್ಮ ಜೀವನವೆಲ್ಲ ಸುಮ್ಮನೆ ಹುಟ್ಟುವುದು ಮತ್ತು ಸಾಯುವುದು—ಇಷ್ಟಕ್ಕೇ ಸೀಮಿತವಾದರೆ ನಾವು ಪ್ರಾಣಿಗಳಿಗಿಂತ ಉತ್ತಮರೇನಲ್ಲ. ಆದ್ದರಿಂದ ಸ್ವಾಮಿ ವಿವೇಕಾನಂದರ ಸ್ಫೂರ್ತಿಯ ಚಿಲುಮೆಯನ್ನು ನಮ್ಮ ಕಣ್ಮುಂದೆ ಸದಾ ಇರಿಸಿಕೊಂಡು ದೃಢ ನಿಧಾರಗಳನ್ನು ಕೈಗೊಂಡು, ಜೀವನವನ್ನು ನಾವು ರೂಪಿಸಿಕೊಳ್ಳಬೇಕು. ದಿನಚರಿಯೊಂದನ್ನು (routine) ಪಾಲಿಸುವುದು ಬಹಳ ಮುಖ್ಯ. ಇದರ ಜೊತೆಗೆ ವ್ಯವಸ್ಥಿತವಾಗಿ ನೀವು ಜೀವನವನ್ನು ಹಿಡಿತದಲ್ಲಿರಿಸಿಕೊಂಡು ನಿಮ್ಮ ಗುರಿಯೆಡೆಗೆ ಪ್ರಯಾಣ ಮಾಡಬೇಕು. ಇಲ್ಲದಿದ್ದರೆ ಜೀವನದ ಅಮೂಲ್ಯ ಘಳಿಗೆಗಳೆಲ್ಲ ವ್ಯರ್ಥವಾಗಿ ಹೋಗುವುವು.

❖ ಮನಸ್ಸನ್ನು ಹಿಡಿತದಲ್ಲಿಡುವುದು ಹೇಗೆ?

ಈ ಶರೀರ ಮತ್ತು ಮನಸ್ಸು ಕೇವಲ ಉಪಕರಣಗಳು—ಈ ಭಾವನೆಯನ್ನು ನೀವು ಸರಿಯಾಗಿ ಗ್ರಹಿಸಿದ್ದೇ ಆದಲ್ಲಿ ನಿಮ್ಮ ಕೆಲಸ ಸುಲಭವಾಗುತ್ತದೆ. ಯಾರು ತಮ್ಮನ್ನು ಶರೀರ, ಮನಸ್ಸು ಎಂದು ತಿಳಿದಿರುತ್ತಾರೋ ಅವರು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾಗುವುದು ಎಂಬ ಭಯದಿಂದ ಬದಲಾವಣೆಯನ್ನೇ ಬಯಸುವುದಿಲ್ಲ. ಆದರೆ ಈ ಶರೀರ ಮನಸ್ಸುಗಳನ್ನು ಸಂಸ್ಕರಿಸದೆ ನಿಮ್ಮ ಜೀವನವನ್ನು ರೂಪಿಸಿಕೊಳ್ಳುವುದು ಅಸಾಧ್ಯ. ನಿಮ್ಮನ್ನು ಜನರು ಗುರುತಿಸುವುದು ನಿಮ್ಮ ಹೆಸರಿನಿಂದ, ನಿಮ್ಮ ದೇಹದಿಂದ, ನಿಮ್ಮ ಮನಸ್ಸಿನಿಂದ. ಅವರು ನಿಮ್ಮನ್ನು ಗುರುತಿಸುವಂತೆ ನೀವು ನಿಮ್ಮ ಶರೀರ ಮನಸ್ಸುಗಳನ್ನು ಹೊರಗಿನ ವಸ್ತುವನ್ನು ನೋಡುವಂತೆ ವಿಷಯೀಕರಿಸಿ. ಅನಂತರ ನೀವಲ್ಲದ, ನಿಮ್ಮಿಂದ ಭಿನ್ನವಾದ ಈ ದೇಹ ಮನಸ್ಸುಗಳಲ್ಲಿರುವ ನ್ಯೂನತೆಗಳನ್ನು ನಿರ್ದಾಕ್ಷಿಣ್ಯವಾಗಿ ಕಾಣಲು ನಿಮಗೆ ಸಾಧ್ಯವಾಗುತ್ತದೆ. ಈ ಹಂತದಲ್ಲಿ ನಿಮಗೆ ಆ ನ್ಯೂನತೆಗಳನ್ನು ತ್ಯಜಿಸಿ ಜೀವನದ ಮೇಲೆ ಹತೋಟಿ ತರಲು ಸಾಧ್ಯವಾಗುತ್ತದೆ. ನೀವು ಬೇರೆ ಮತ್ತು ನಿಮ್ಮ ದೇಹ ಮನಸ್ಸುಗಳು ಬೇರೆ ಎಂದು ಭಾವಿಸಿ. ನೀವು ಮೂರ್ತಿಯಾದರೆ ನಿಮ್ಮ ದೇಹ ಮನಗಳು ಕೇವಲ ಪ್ರತಿಬಿಂಬ ಎಂದು ತಿಳಿಯಿರಿ. ಇದರಿಂದ ಶರೀರ ಮನಸ್ಸುಗಳ ಮೇಲಿರುವ ಆಸಕ್ತಿ, ಮೋಹ ದೂರಸರಿದು ನಮ್ಮ ವ್ಯಕ್ತಿತ್ವದ ನಿಜ ಆಯಾಮ ನಮಗೆ ತಿಳಿದುಬರುವುದು.